**ಸ್ವಾತಂತ್ರ್ಯ:** ಪತಿಯ ಜೀವನದ ಮಹೋದ್ದೇಶದಲ್ಲಿ ತಮಗೂ ಪಾಲಿದೆ, ಪತಿಯ ಧರ್ಮವೇ ತಮ್ಮ ಧರ್ಮ ಎಂದು ಅರಿತುಕೊಂಡಿದ್ದ ಶ್ರೀಮಾತೆ ಆ ವಿಷಯದಲ್ಲಿ ತಮ್ಮ ಸ್ವಾತಂತ್ರ್ಯವನ್ನೂ ತೋರಿಸಿದರು. ಶ್ರೀರಾಮಕೃಷ್ಣರು ತಮ್ಮ ಬಳಿ ಬಂದ ಬಾಲಕ ಶಿಷ್ಯರಿಗೆ, ರಾತ್ರಿ ಅಲ್ಪ ಆಹಾರ ಸೇವಿಸಿ, ಸಾಧನೆ ಭಜನೆಗಳಲ್ಲಿ ಕಳೆಯಲು ನಿರ್ದೇಶಿಸುತ್ತಿದ್ದರು. ಆದರೆ ಪತಿಯ ಶಿಷ್ಯರನ್ನು ತಮ್ಮ ಮಕ್ಕಳೆಂದೇ ತಿಳಿದು, ಶ್ರೀಮಾತೆ ಅವರಿಗಾಗಿ ಅಡುಗೆ ಮಾಡಿ, ಹೊಟ್ಟೆ ತುಂಬಾ ತಿನ್ನಿಸುತ್ತಿದ್ದರು. ಇದನ್ನು ಶ್ರೀರಾಮಕೃಷ್ಣರು ವಿರೋಧಿಸಿದಾಗ, ತನ್ನ ಮಕ್ಕಳ ಆಧ್ಯಾತ್ಮಿಕ ಜವಾಬ್ದಾರಿಯನ್ನು ತಾವೇ ವಹಿಸಿಕೊಳ್ಳುವುದಾಗಿ ಶ್ರೀಮಾತೆಯು ಧೀರತನದಿಂದ ಉತ್ತರವಿತ್ತರು. ಇದನ್ನು ಶ್ರೀರಾಮಕೃಷ್ಣರು ಹರ್ಷದಿಂದ ಪ್ರೋತ್ಸಾಹಿಸಿದರು.

**ಕರ್ತವ್ಯ:** ಕೊನೆಗೆ ಶ್ರೀರಾಮಕೃಷ್ಣರಿಗೆ ಕ್ಯಾನ್ಸರ್ ರೋಗ ಬಂದಾಗ ಅವರನ್ನು ಕೊಲ್ಕತಾ ನಗರದ ಒಂದು ಬಾಡಿಗೆ ಮನೆಯಲ್ಲಿರಿಸಿ ಚಿಕಿತ್ಸೆ ಮಾಡಿಸಲು ಅವರ ಶಿಷ್ಯರು ನಿಶ್ಚಯಿಸಿದರು. ಅಂತೆಯೇ ಕೆಲವರು ಶಿಷ್ಯರು ಅಲ್ಲಿದ್ದುಕೊಂಡು ಶ್ರೀರಾಮಕೃಷ್ಣರಿಗೆ ಸೇವೆ ಮಾಡತೊಡಗಿದರು. ಕೆಲವು ದಿನಗಳಲ್ಲೇ ಶಿಷ್ಯರಿಗೆ ಅರಿವಾಯಿತು, ಶ್ರೀರಾಮಕೃಷ್ಣರ ಸೇವೆಗೆ ಶ್ರೀಮಾತೆಯ ಆವಶ್ಯಕತೆ ಇದೆ ಎಂದು. ಮೊದಲೇ ಲಜ್ಜೆ, ಸಂಕೋಚಗಳಿಂದ ಕೂಡಿದ ಮಾತೆ ಈಗ ಈ ಪುರುಷರು ವಾಸಿಸುವ ಮನೆಗೆ ಹೇಗೆ ಬರುವರೆಂದು ಶಿಷ್ಯರಿಗೆ ಅನುಮಾನವಿತ್ತು. ಇದನ್ನು ಅರಿತ ಮಾತೆ, ಕರ್ತವ್ಯವನ್ನು ನೆರವೇರಿಸಲು, ತಮ್ಮ ಸಹಜಸ್ವಭಾವನ್ನು ಬದಿಗಿರಿಸಿ, ಆ ಮನೆಗೆ ಬಂದು ಪತಿಯ ಸೇವೆ ಮಾಡಲು ಮುಂದಾದರು. ಅದೇ ರೀತಿ ಶ್ರೀರಾಮಕೃಷ್ಣರ ಮಹಾಸಮಾಧಿಯವರೆಗೆ ತಮ್ಮ ಕರ್ತವ್ಯವನ್ನು ನಿರ್ವಹಿಸಿದರು. ಹೀಗೆ **ಧೀರತೆ, ಲಜ್ಜೆ, ಸಹನೆ, ಸ್ನೇಹ, ನಮ್ರತೆ, ಸ್ವಾತಂತ್ರ್ಯ, ಕರ್ತವ್ಯ** – ಇವುಗಳೇ ಆಧ್ಯಾತ್ಮಿಕತೆಗೆ ಸಹಕಾರಿಯಾಗುವ ಸದ್ಗುಣಗಳು. ಇವುಗಳಿಂದಲೇ ಆದರ್ಶ ದಾಂಪತ್ಯ ಸಾಧ್ಯವೆಂದು ಶ್ರೀಮಾತೆಯವರು ನಮಗೆ ತೋರಿಸಿಕೊಟ್ಟಿದ್ದಾರೆ.

ಶ್ರೀಮಾತೆಯವರು ಸಾಮಾನ್ಯ ಜನರಂತೆಯೇ ತಮ್ಮ ತವರುಮನೆಯ ಸಂಸಾರದ ಸಮಸ್ಯೆಗಳ ಜಂಜಾಟದ ಮಧ್ಯದಲ್ಲೇ ಜೀವಿಸಬೇಕಾಗಿತ್ತು. ಆದರೂ ತಮ್ಮ ಆಧ್ಯಾತ್ಮಿಕ ನೆಲೆಯಲ್ಲಿ ಇದ್ದುಕೊಂಡು ಅವರು ಹೇಗೆ ನಿರ್ಲಿಪ್ತರಾಗಿದ್ದರು! ಯಾರಾದರೂ ಸ್ತ್ರೀಯರು ತಮ್ಮ ಸಂಸಾರದ ಸದಸ್ಯರ ಮೇಲೆ ದೋಷಾರೋಪವನ್ನು ಮಾಡಿದರೆ, "ಸಂಸಾರದಲ್ಲಿ ಎಷ್ಟು ತರಹದ ಜನರಿದ್ದಾರೆ? ಎಲ್ಲರೊಂದಿಗೂ ಸಹನೆಯಿಂದ ಬದುಕಬೇಕು. ಯಾರು ಸಹಿಸುವರೋ ಅವರೇ ಬದುಕುವರು" ಅನ್ನುವರು. ಅನೇಕ ಸ್ತ್ರೀಯರು ತಮ್ಮ ದಾಂಪತ್ಯಜೀವನದ ಸಮಸ್ಯೆಗಳನ್ನು ಶ್ರೀಮಾತೆಯವರಲ್ಲಿ ಹೇಳಿಕೊಳ್ಳುತ್ತಿದ್ದರು. ಒಬ್ಬ ಹೆಂಗಸು ತನ್ನ ಪತಿಯು ಕಪ್ಪು ಬಣ್ಣದವನೆಂದೂ ಚಾರಿತ್ರ್ಯಹೀನನೆಂದೂ, ಅದಕ್ಕಾಗಿ ತಾನು ಪತಿಯ ಮನೆಗೆ ಹೋಗುವುದಿಲ್ಲವೆಂದೂ ಹೇಳಿದಾಗ ಶ್ರೀಮಾತೆಗೆ ಆಶ್ಚರ್ಯವಾಯಿತು. "ಎಂಥವನಾದರೂ ಅವನು ನಿನ್ನ ಪತಿ, ನಿನ್ನನ್ನಂತೂ ಅವನು ತಿರಸ್ಕರಿಸಿಲ್ಲ, ನೀನು ಅವನ ಬಳಿ ಹೋಗುವುದೇ ಸರಿ" ಎಂದು ಅವಳನ್ನು ಪತಿಯ ಬಳಿಗೆ ಕಳುಹಿಸಿದರು. ಶ್ರೀಮಾತೆ ದಕ್ಷಿಣೇಶ್ವರದ ಕಾಳಿ ಮಂದಿರದಲ್ಲಿರುವಾಗ ಅನೇಕ ಬೆಸ್ತ ಮಹಿಳೆಯರು ತಮ್ಮ ಮೀನಿನ ಬುಟ್ಟಿಗಳನ್ನು ಅವರ ಕೋಣೆಯ ಕೈಸಾಲೆಯಲ್ಲಿಟ್ಟು ಗಂಗೆಯಲ್ಲಿ ಸ್ನಾನಕ್ಕೆಂದು ಹೋಗುವರು. ಸ್ನಾನ ಮುಗಿಸಿ ಬಂದು ಶ್ರೀಮಾತೆಯ ಬಳಿ ಕುಳಿತು ಹರಟುವರು. ಎಲ್ಲರೂ ತಮ್ಮತಮ್ಮ ಕುಟುಂಬದ ಸಮಾಚಾರಗಳನ್ನು ಶ್ರೀಮಾತೆಗೆ ಹೇಳುವರು. "ಇಂದು ಈ ಪಲ್ಯ ತಯಾರಿಸಿದ್ದೇನೆ" ಎಂದು ಒಬ್ಬಳು, "ನನ್ನ ಮಗನಿಗೆ ಕಾಯಿಲೆ ಆಗಿದೆ" ಎಂದು ಇನ್ನೊಬ್ಬಳು, "ಮಗಳಿಗೆ ವಿವಾಹ ನಿಶ್ಚಯವಾಗಿದೆ" ಎಂದೊಬ್ಬಳು, "ನನ್ನ ಪತಿಗೆ ಈ ಸಿಹಿತಿಂಡಿ ಇಷ್ಟ " ಎಂದು ಮತ್ತೊಬ್ಬಳು ಹೇಳಿಕೊಳ್ಳುವಳು. ಈ ರೀತಿಯಲ್ಲಿ ಮಾತುಕತೆ ನಡೆಯುವುದು. ಅವರಲ್ಲಿ ಒಬ್ಬಳು 'ಕ್ಷಾಂತಿದಾಸಿ' ಎಂಬ ಹೆಸರಿನವಳು. ಪತಿಯೊಂದಿಗೆ ದಿನವೂ ಜಗಳ. ಶ್ರೀಮಾತೆಗೆ ನಿತ್ಯವೂ ಜಗಳದ ವಿವರವನ್ನು ತಿಳಿಸುವಳು. ಹೀಗೆ ಅನೇಕ ದಿನಗಳು ಕಳೆದು, ಒಂದು ದಿನ ಅವರಿಬ್ಬರ ಜಗಳ ತಾರಕಕ್ಕೇರಿ, ಪತಿ ಅವಳ ಕೆನ್ನೆಗೆ ಹೊಡೆದು ಅವಳ ಹಲ್ಲು ಬಿದ್ದುಹೋಯಿತು. ಅಂದು ಅಳುತ್ತಾ ಶ್ರೀಮಾತೆಗೆ ಎಲ್ಲಾ ವಿವರ ತಿಳಿಸಿದಳು. ಶ್ರೀಮಾತೆಗೆ ಇದನ್ನು ಕೇಳಿ ಸಹಿಸಲಾಗಲಿಲ್ಲ. "ಎಂತಹ ಗಂಡಸರಪ್ಪಾ... ಅದೇನು ಹೆಣ್ಣಿಗೆ ಯಾವ ಸ್ಥಾನವೂ ಇಲ್ಲವೆ?..." ಎಂದರು. ಕ್ಷಾಂತಿದಾಸಿಯನ್ನು ಸಮಾಧಾನಿಸಿ ಅವಳಿಗೆ, "ನೋಡು, ನೀನು ಇವತ್ತಿನಿಂದ ಅವನೊಂದಿಗೆ ಮಾತನಾಡಲೇಬೇಡ. ಯಾವ ಜಗಳಕ್ಕೂ ಹೋಗಬೇಡ. ಮಾತ್ರವಲ್ಲ, ಸರಸ ಸಲ್ಲಾಪವನ್ನೂ ಮಾಡಬೇಡ. ನಿನ್ನಷ್ಟಕ್ಕೆ ನೀನು ಇದ್ದುಬಿಡು. ಗೃಹಕೃತ್ಯಗಳನ್ನೆಲ್ಲಾ ಮಾಡು. ಶಾಂತಳಾಗಿದ್ದುಕೊಂಡು 'ನಿನಗೂ ಸಂಸಾರದಲ್ಲಿ ಅವನಂತೆಯೇ ಸಮನಾದ ಪಾಲಿದೆ' ಎಂಬುದನ್ನು ಅರ್ಥಮಾಡಿಸು..." ಎಂದು ಹಲವಾರು ಸಲಹೆಗಳನ್ನು ಹೇಳಿ, ಅವಳನ್ನು ಮನೆಗೆ ಕಳುಹಿಸಿದರು. ಆ ಬೆಸ್ತ ಮಹಿಳೆ ಮಾತೆಯ ಸಲಹೆಯಂತೆ ನಡೆಯತೊಡಗಿದಳು. ಕೆಲವು ದಿನಗಳ ನಂತರ ಅವಳ ಪತಿಗೆ ತನ್ನ ತಪ್ಪಿನ ಅರಿವಾದಾಗ, ಅವಳಲ್ಲಿ ಕ್ಷಮೆ ಯಾಚಿಸಿದನು. ಈ ವಿಷಯವನ್ನು ಕೇಳಿದಾಗ ಶ್ರೀಮಾತೆ ಬಹಳ ಸಮಾಧಾನಪಟ್ಟರು.

ಪುರುಷರು ಸ್ತ್ರೀಯರ ಮೇಲೆ ದಬ್ಬಾಳಿಕೆ ಮಾಡುವುದನ್ನು ಶ್ರೀಮಾತೆಗೆ ಸಹಿಸಲಾಗುತ್ತಿರಲಿಲ್ಲ. ಅವರು 'ಉದ್ಬೋಧನ' ನಿವಾಸದಲ್ಲಿ ವಾಸಿಸುತ್ತಿರುವಾಗ, ಒಂದು ದಿನ ತಮ್ಮ ಕೊಠಡಿಯ ಮುಂದೆ ರಸ್ತೆಗೆ ಮುಖವಾಗಿರುವ ಕೈಸಾಲೆಯಲ್ಲಿ ಕುಳಿತು, ಜಪ ಮಾಡುತ್ತಿದ್ದರು. ರಸ್ತೆಯ ಇನ್ನೊಂದು ಭಾಗದಲ್ಲಿ ಚಿಕ್ಕ ಚಿಕ್ಕ ಗುಡಿಸಲುಗಳನ್ನು ಕಟ್ಟಿಕೊಂಡು, ಕೂಲಿಕೆಲಸಗಾರರು ತಮ್ಮ ಕುಟುಂಬದೊಂದಿಗೆ ವಾಸಿಸುತ್ತಿದ್ದರು. ಹಠಾತ್ತಾಗಿ ಒಂದು ಗುಡಿಸಲಿನಿಂದ ಹೊಡೆಯುವ ಶಬ್ದ ಕೇಳಿಬಂತು. ಒಬ್ಬ ಕೂಲಿಗಾರ ತನ್ನ ಮಡದಿಯನ್ನು ಹೊಡೆಯುತ್ತಿದ್ದಾನೆ. ಅವನ ಕೋಪವು ಹೆಚ್ಚುತ್ತಿದ್ದಂತೆ, ಲಾಠಿಯಿಂದ ಜೋರಾಗಿ ಹೇಗೆ ಹೊಡೆದನೆಂದರೆ ಅವನ ಹೆಂಡತಿ ತನ್ನ ಮಡಿಲಲ್ಲಿದ್ದ ಮಗುವಿನೊಂದಿಗೆ ಕಿರುಚುತ್ತ, ಗುಡಿಸಲಿನಿಂದ ಹೊರಗೆ ಓಡಿಬಂದಳು. ಅವಳ ಗಂಡ ಅಲ್ಲಿಗೂ ಬಂದು ಹೊಡೆಯಲು ಶುರುಮಾಡಿದನು. ಈಗ ಶ್ರೀಮಾತೆಯ ಜಪವು ನಿಂತಿತು. ಅವರಿಗೆ ಇದು ಸಹಿಸದಾಯಿತು. ಎದ್ದು ನಿಂತು ಕೈಸಾಲೆಯ ಕಬ್ಬಿಣದ ಕಟಕಟೆಯನ್ನು ಹಿಡಿದು ನಿಂತು ನೋಡಿದರು. ಯಾವಾಗಲೂ ತಗ್ಗುಸ್ವರದಲ್ಲೇ ಮಾತನಾಡುತ್ತಿದ್ದ ಶ್ರೀಮಾತೆ ಅಂದು ಜೋರಾಗಿ ಆ ಕೂಲಿಯವನಿಗೆ, "ನೀನೇನು ಇಂದು ಇವಳನ್ನು ಕೊಂದುಹಾಕಲು ತೀರ್ಮಾನಿಸಿರುವೆಯಾ? ಆಹಾ! ಎಂತಹ ಅನ್ಯಾಯ!" ಎಂದು ಕೋಪದಿಂದ ಹೇಳಿದರು. ಬಹಳ ಕೋಪದಲ್ಲಿದ್ದ ಆ ಕೂಲಿಗಾರ ಶ್ರೀಮಾತೆಯವರ ಧ್ವನಿಯನ್ನು ಕೇಳಿ ಅವರ ಕಡೆ ತಿರುಗಿದನು. ಅವರನ್ನು ಕಾಣುತ್ತಿದ್ದಂತೆ ತಲೆಯನ್ನು ತಗ್ಗಿಸಿ, ಶಾಂತನಾಗಿ ಹೊರಟುಹೋದನು. 'ಸರಿಯಾದ ಸಮಯಕ್ಕೆ ಅಡುಗೆ ಮಾಡಿ ಬಡಿಸಲಿಲ್ಲ' ಎನ್ನುವುದೇ ಅವನ ಪತ್ನಿಯ ಅಪರಾಧವಾಗಿತ್ತು. ಸ್ತ್ರೀಯರನ್ನು ಈ ರೀತಿ ದಂಡಿಸುವುದನ್ನು ಶ್ರೀಮಾತೆ ಸಹಿಸುತ್ತಿರಲಿಲ್ಲ.

"ಆಧ್ಯಾತ್ಮಿಕ ಜೀವನ ನಡೆಸುವುದು ಹೇಗೆ?" ಎಂದು ಒಬ್ಬ ಮಹಿಳೆ ಶ್ರೀಮಾತೆಯವರನ್ನು ಕೇಳಿದಳು. ಆಕೆಯ ಹಿನ್ನೆಲೆಯನ್ನು ಅರಿತ ಮಾತೆ ಸ್ವಲ್ಪ ಮುನಿಸಿನಿಂದಲೇ ಅವಳಿಗೆ, "ವರ್ಷವರ್ಷವೂ ಮಕ್ಕಳನ್ನು ಹೆರುವುದನ್ನು ನಿಲ್ಲಿಸಿ, ಸಂಯಮದ ಜೀವನವನ್ನು ಅಭ್ಯಾಸ ಮಾಡು. ಭಗವಂತನ ಕಡೆ ಮನಸ್ಸನ್ನು ಕೊಡು" ಎಂದರು. ಗೃಹಸ್ಥರಿಗೆ ಶ್ರೀಮಾತೆಯವರು ಹೀಗೆ ಹೇಳುವರು: "ಸಂಸಾರದಲ್ಲಿದ್ದು ದೊಡ್ಡ ದೊಡ್ಡ ತಪಸ್ಸುಗಳನ್ನು ಮಾಡಲು ಅಸಾಧ್ಯ. ಆದರೆ ಸದಾ ಭಗವತ್ ಚಿಂತನೆ, ಪ್ರಾರ್ಥನೆ ಇವುಗಳನ್ನು ನಡೆಸುತ್ತಾ ಸಂಸಾರದ ಕರ್ತವ್ಯಗಳನ್ನು ಮಾಡುತ್ತಿರಿ. ಇದರಿಂದ ಕುಟುಂಬದಲ್ಲಿ ಶಾಂತಿ, ಸಮಾಧಾನಗಳು ನೆಲಸುತ್ತವೆ." ಸ್ವಂತ ಜೀವನವನ್ನು ಉತ್ತಮಗೊಳಿಸಿಕೊಂಡರೆ, ತಮ್ಮ ಮನೆಗಳಲ್ಲಿ ಶಾಂತಿ ಸಮಾಧಾನಗಳು ನೆಲೆಸಲು ಸ್ತ್ರೀಯರೇ ಕಾರಣರಾಗುತ್ತಾರೆಂದು ಶ್ರೀಮಾತೆ ಹೇಳುತ್ತಿದ್ದರು. "ಮನೆಯಲ್ಲಿ ಪುರುಷರಿಗಿದ್ದಂತೆ ಸ್ತ್ರೀಯರಿಗೂ ಸಮಾನವಾದ ಪಾಲಿದೆ. ಅವಳು ಸಹಧರ್ಮಿಣಿ. ಅವಳಿಗೆ ಬೇಕಾದ ಎಲ್ಲಾ ಸನ್ಮಾನ, ಗೌರವಗಳು ಸಿಗಲೇಬೇಕು" ಎನ್ನುವರು. ಶ್ರೀಮಾತೆಯವರು ಆಗಾಗ ಗೃಹಸ್ಥರ ಮನೆಗಳಿಗೆ ಭೇಟಿಕೊಡುತ್ತಿದ್ದರು. ಮನೆಯ ಓರಣ, ಸ್ವಚ್ಛತೆಗಳನ್ನು ಹೊಗಳಿ ಅಲಂಕಾರಗಳನ್ನು ಪ್ರೋತ್ಸಾಹಿಸುತ್ತಿದ್ದರು. ಸುಮಂಗಲಿಯರು ತಮ್ಮ ಶೃಂಗಾರದ ವಸ್ತುಗಳಾದ ಸಿಂಧೂರ, ಕುಂಕುಮ, ಬಳೆ ಇವುಗಳನ್ನು ಧರಿಸದಿದ್ದರೆ ಅಸಂತುಷ್ಟರಾಗುತ್ತಿದ್ದರು. ಅಂತೆಯೇ ವಿಧವೆಯರು ಕೂಡ ಅತಿ ಕಠಿಣವಾದ ಜೀವನವನ್ನು ನಡೆಸದೆ, ಸಂಯಮದೊಂದಿಗೆ ಭಕ್ತಿಮಾರ್ಗದಲ್ಲಿ ನಡೆಯಬೇಕೆಂದು ಪ್ರೋತ್ಸಾಹಿಸುತ್ತಿದ್ದರು.

ಕೌಟುಂಬಿಕ ಸಮಸ್ಯೆಯೇ ಇಂದಿನ ಅತಿ ಮುಖ್ಯ ಸಮಸ್ಯೆಯಾಗಿದೆ. ಈಗಿನ ಸಮಾಜದ ಜನರು ತಾವು ತುಂಬ ಬುದ್ಧಿವಂತರೆಂದೂ, ವಿದ್ಯಾವಂತರೆಂದೂ ತಿಳಿದು, ಬರೀ ಧನಕನಕಗಳ ಹಿಂದೆ ಅದೆಷ್ಟು ವೇಗವಾಗಿ ಓಡುತ್ತಿದ್ದಾರೆಂದರೆ ಜೀವನದ ಮೌಲ್ಯವನ್ನು, ಆದರ್ಶವನ್ನು ಅರಿಯಲೂ, ಚಿಂತಿಸಲೂ ಅವರಿಗೆ ಸ್ವಲ್ಪವೂ ಸಮಯವಿಲ್ಲದಾಗಿದೆ. ಕಡಿವಾಣ ಬಿಚ್ಚಿಕೊಂಡ ಕುದುರೆಯಂತೆ ದಿಕ್ಕಾಪಾಲಾಗಿ ಅಶಾಂತಿಯಿಂದ ನೊಂದು, ಶಾಂತಿಗಾಗಿ ಪರಿತಪಿಸುತ್ತ ಅವರು ಅತ್ತಿತ್ತ ಅಲೆದಾಡುತ್ತಿದ್ದಾರೆ. ಅಂಥವರು ಸ್ವಾರ್ಥವೆಂಬ ಚಿಕ್ಕ ಪರಿಧಿಯಿಂದ ಹೊರಬಂದು, ವಿಶ್ವಕುಟುಂಬವನ್ನು ಸೇರಿ, ಎಲ್ಲರನ್ನೂ ತಮ್ಮವರನ್ನಾಗಿ ಮಾಡಿಕೊಂಡರೆ, ಶಾಂತಿಯೂ ನೆಮ್ಮದಿಯೂ ದೊರೆಯುವುದು.

ಇದೇ ಶ್ರೀಮಾತೆಯ ಕೊನೆಯ ಸಂದೇಶವಾಗಿತ್ತು: "ಮಗು, ಈ ಜಗತ್ತಿನಲ್ಲಿ ಯಾರೂ ಹೊರಗಿನವರು ಎಂಬುವವರಿಲ್ಲ. ಎಲ್ಲರೂ ನಿನ್ನವರೇ. ಜಗತ್ತನ್ನು ನಿನ್ನದನ್ನಾಗಿ ಮಾಡಿಕೊ." ಗೃಹಸ್ಥರಿಗೆ ಅವರು ಮತ್ತೆ ಮತ್ತೆ ಹೇಳುತ್ತಿದ್ದರು: **"ಸಂಸಾರ ದಲ್ಲಿ ಕಷ್ಟಗಳನ್ನು ಎದುರಿಸಲಾರಿರಿ ಎಂದು ತಿಳಿಯಬೇಡಿ. ಅವುಗಳು ಬಂದೇ ಬರುತ್ತವೆ. ಆದರೆ ಅವು ಕೊನೆಯವರೆಗೆ ಇರುವುದಿಲ್ಲ. ಸೇತುವೆಯ ಕೆಳಗೆ ನದಿಯು ಹರಿದುಹೋಗುವಂತೆ ಬಂದು ಹೋಗುತ್ತವೆ... ಸದಾ ಭಗವಂತನನ್ನು ಪ್ರಾರ್ಥಿಸಿ. ಪ್ರಾರ್ಥನೆ... ಪ್ರಾರ್ಥನೆ... ಪ್ರಾರ್ಥನೆ."** •

## ಧರ್ಮ ಎಂದರೆ ಏನು?

**ಧಾರಣಾತ್ ಧರ್ಮ ಇತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ ।**
**ಯತ್ ಸ್ಯಾತ್ ಧಾರಣಸಂಯುಕ್ತಂ ಸ ಧರ್ಮ ಇತಿ ನಿಶ್ಚಯಃ ॥** (ಮಹಾಭಾರತ)

"ಧರ್ಮವು ಜನರನ್ನು ಎತ್ತಿ ಹಿಡಿದು ಕಾಪಾಡುತ್ತದೆ. ಹಾಗೆ ಅದು ಧರಿಸಿ ಕಾಪಾಡುವುದರಿಂದ ಅದಕ್ಕೆ 'ಧರ್ಮ'ವೆಂದು ಹೆಸರು. ಯಾವುದು ನಮ್ಮನ್ನು ಧರಿಸಿ ಕಾಪಾಡುತ್ತದೆಯೋ ಅದೇ ಧರ್ಮ ಎಂದು ನಿಶ್ಚಯಾತ್ಮಕವಾಗಿ ಹೇಳಲಾಗಿದೆ."

ಈ ಹಿನ್ನೆಲೆಯಲ್ಲಿ ಆಲೋಚಿಸಿದಾಗ ಧರ್ಮವೇ ಜೀವನದ ಆಧಾರ. ಧರ್ಮವೇ ನಮ್ಮ ಜೀವನದ ಸತ್ವ. ಧರ್ಮ ಎಂದು ಹೇಳಿದಾಗ ಅಲ್ಲಿ ಹತ್ತು ಲಕ್ಷಣಗಳಿರಬೇಕು ಎಂದು ಮನುಸ್ಮೃತಿ ಹೇಳುತ್ತದೆ:

**ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।**
**ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥**

"ಧೈರ್ಯ, ಕ್ಷಮೆ, ಸಂಯಮ, ಕದಿಯದಿರುವಿಕೆ, ಶುಚಿಯಾಗಿರುವುದು, ಇಂದ್ರಿಯನಿಗ್ರಹ, ವಿವೇಕ, ಶಾಸ್ತ್ರಜ್ಞಾನ, ಸತ್ಯಪರಿಪಾಲನೆ, ಅಕ್ರೋಧ – ಇವು ಧರ್ಮದ ಹತ್ತು ಲಕ್ಷಣಗಳು."

ಗೃಹಸ್ಥಾಶ್ರಮವು ಸಮಾಜದ ಒಂದು ಪ್ರಧಾನ ಅಂಗ. ಕುಟುಂಬವ್ಯವಸ್ಥೆಯು ಆರೋಗ್ಯಕರವಾಗಿದ್ದು, ಕುಟುಂಬದ ಸದಸ್ಯರೆಲ್ಲರೂ ದಿನೇದಿನೇ ಶಾರೀರಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕವಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದು, ಶಾಂತಿಸೌಹಾರ್ದಗಳಿಂದ ಇರುವುದಾದರೆ ಸಮಾಜವೂ, ರಾಷ್ಟ್ರವೂ ಆರೋಗ್ಯಕರವಾಗಿರುತ್ತದೆ, ಪ್ರಗತಿಪರವಾಗುತ್ತದೆ. ಕುಟುಂಬವು ಆರೋಗ್ಯಕರವಾಗಿ ಅರಳಲು ಧರ್ಮವೇ ಆಧಾರ. ಗೃಹಸ್ಥಾಶ್ರಮದಲ್ಲಿ ಧರ್ಮವು ನೆಲೆಗೊಳ್ಳಬೇಕಾದುದು ಅವಶ್ಯಕ. ಏಕೆಂದರೆ ರಾಷ್ಟ್ರದ ಸರ್ವತೋಮುಖ ವಿಕಾಸದಲ್ಲಿ ಗೃಹಸ್ಥನ ಹೊಣೆಗಾರಿಕೆಯೇ ದೊಡ್ಡದು. ಸಮಾಜಕ್ಕೆ ಅನ್ನ ಕೊಡುವವನು ಅವನು. ಸಮಾಜಕ್ಕೆ ಸಂಪಾದನೆ ಬರುವುದು ಅವನಿಂದಲೇ. ಜೀವನದ ವಿವಿಧ ಕ್ಷೇತ್ರಗಳಲ್ಲಿ ಪ್ರತಿಭಾವಂತ, ದಕ್ಷ ಪ್ರಜೆಗಳು ಹೊರಬರುವುದು ಗೃಹಸ್ಥನ ಮನೆಯಿಂದ. ಹಾಗಿರುವಾಗ ಅವನ ಮನೆ "ಧರ್ಮನೀಡ" (ಧರ್ಮದ ಗೂಡು) ಆಗಬೇಕಾದ್ದು ಬಹುಮುಖ್ಯ. ಮದುವೆಯಾದ ಮಾತ್ರಕ್ಕೆ ವ್ಯಕ್ತಿ ಸದ್ಗೃಹಸ್ಥನಾಗುತ್ತಾನೆಯೆ? ಕೌಟುಂಬಿಕ ಜೀವನದಲ್ಲಿ ಯಶಸ್ವಿಯಾಗುತ್ತಾನೆಯೆ? ಇಲ್ಲ. ಧರ್ಮಪಾಲನೆಯ ಗುರುತರ ಜವಾಬ್ದಾರಿಯನ್ನು ನಿಭಾಯಿಸುವುದರಿಂದಲೇ ವ್ಯಕ್ತಿ ಸದ್ಗೃಹಸ್ಥನಾಗುವುದು. ಯಾರ ಕೌಟುಂಬಿಕ ವಾತಾವರಣದಲ್ಲಿ ಧರ್ಮ ನೆಲೆಸಿದೆಯೋ, ಆ ಮನೆಯು ಶಿಕ್ಷಣದ ಕೇಂದ್ರ, ಸಂಸ್ಕೃತಿಯ ಧಾಮ ಮತ್ತು ಆನಂದಧಾಮವಾಗುತ್ತದೆ.

ಗೃಹಸ್ಥನಾದ ಪ್ರತಿಯೊಬ್ಬ ವ್ಯಕ್ತಿಯೂ ಪಂಚಯಜ್ಞಗಳನ್ನು ಮಾಡಬೇಕೆಂದು ನಮ್ಮ ಧರ್ಮಶಾಸ್ತ್ರಗಳು ವಿಧಿಸಿವೆ:

೧. **ದೇವಯಜ್ಞ:** ನಾವು ಆರೋಗ್ಯಕರವಾದ ಮನುಷ್ಯ ಶರೀರವನ್ನು ಪಡೆಯಲು, ನಾವು ಇಂದು ಇರುವಂತಹ ಅನುಕೂಲಕರ ವಾತಾವರಣದಲ್ಲಿ ಹುಟ್ಟಿಬರಲು ಭಗವಂತನ ಕೃಪೆಯೇ ಕಾರಣ. ಈ ಭಗವತ್ಕೃಪೆಯಿಂದಲೇ ಬೀಸುವ ಗಾಳಿ, ಹರಿಯುವ ನೀರು, ಬೆಳಕು ನೀಡುವ ಸೂರ್ಯಕಿರಣಗಳು, ಸಸ್ಯ–ವನಸ್ಪತಿಗಳು ನಮಗೆ ಹಿತವನ್ನೀಯುತ್ತಿರುವುದು. ಆದ್ದರಿಂದ ಇದಕ್ಕೆ ಅನುಗುಣವಾಗಿ ದೇವರಿಗೆ ಕೃತಜ್ಞತೆಯನ್ನು ಅರ್ಪಿಸುವುದು ಬಹಳ ಮುಖ್ಯವಾದುದು. ಇದಕ್ಕೆ ಅನುಗುಣವಾಗಿ ಪ್ರತಿದಿನ ಮಾಡುವ ದೇವತಾಪೂಜೆ, ಅರ್ಚನೆ, ಪ್ರಾರ್ಥನೆ ಇತ್ಯಾದಿಗಳನ್ನು 'ದೇವಯಜ್ಞ' ಎಂದು ಕರೆಯಲಾಗಿದೆ.

೨. **ಋಷಿಯಜ್ಞ:** ನಮ್ಮ ಪರಂಪರೆ ಏಳು ಸಾವಿರ ವರ್ಷಗಳಿಗೂ ಪುರಾತನವಾದುದು. ನಮ್ಮ ಸಂಸ್ಕೃತಿಗೆ ಹೋಲಿಸಿದರೆ, ಇತರ ಸಂಸ್ಕೃತಿ–ನಾಗರಿಕತೆಗಳು ಕೇವಲ ಶಿಶುಸಮಾನವಾದುವು. ನಮಗಿಂದು ದೊರೆತಿರುವ ಸಮೃದ್ಧ ಪರಂಪರೆ, ಸಾಂಸ್ಕೃತಿಕ ಮೌಲ್ಯಗಳು, ಉನ್ನತ ಆಧ್ಯಾತ್ಮಿಕ ಸತ್ಯಗಳು – ಇವೆಲ್ಲ ಋಷಿಮುನಿಗಳ ಆಳವಾದ ಅಂತರ್ದೃಷ್ಟಿ,

**ನಿಸ್ವಾರ್ಥವಾದ ಮತ್ತು ಸಮಷ್ಟಿಹಿತಕ್ಕೆ ಅನುಗುಣವಾದ ವ್ಯಕ್ತಿಗತ ನಡವಳಿಕೆಯನ್ನು ಧರ್ಮವು ಪ್ರತಿಪಾದಿಸುತ್ತದೆ. ಈ ದೃಷ್ಟಿಯಲ್ಲಿ ಕೌಟುಂಬಿಕ ಪರಿಧಿಯಲ್ಲಿ ಗೃಹಸ್ಥನೊಬ್ಬನ ಕರ್ತವ್ಯಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಶ್ರೀರಾಮಕೃಷ್ಣರ ಉಪದೇಶಗಳನ್ನು ಮನೋಜ್ಞವಾಗಿ ತಿಳಿಸಿಕೊಟ್ಟಿರುವ ಮಾತಾಜಿಯವರು ಚಳ್ಳಕೆರೆಯ ಶ್ರೀಶಾರದಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**